5C.R.P.67

Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 172/2022

ದಿನಾಂಕ ಃ 12.11.2024 ರಂದು ಪ್ರಮಾಣ ವಚನ ಬೋದಿಸಲಾಗಿದೆ.

ಸಿ. ಡಬ್ಲ್ಯೂ: 1 ಪಿ. ಡಬ್ಲ್ಯೂ:1

| | |
|---|---|
| ಸಾಕ್ಷಿದಾರರ ಹೆಸರು | ಸಿದ್ದರಾಜು |
| ತಂದೆಯ ಹೆಸರು | ಸಿದ್ದೇಗೌಡ |
| ವಯಸ್ಸು | 34 ವರ್ಷ |
| ಉದ್ಯೋಗ | ವರ್ಕ್ ಶಾಪ್ ನಲ್ಲಿ ಕೆಲಸ |
| ವಾಸ | ಮೈಸೂರು. |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1) ನನ್ನ ಸ್ವಂತ ಊರು, ನೆಟ್ಕಲ್, ಮಳವಳ್ಳಿ ತಾಲ್ಲೂಕು. ನನ್ನ ತಾಯಿಯ ಹೆಸರು ಮಹದೇವಮ್ಮ. ನನ್ನ ತಾಯಿ ತೀರಿಕೊಂಡು 2 ವರುಷ ಆಗಿದೆ. ಅವರು ತೀರಿಕೊಳ್ಳುವ ಕಾಲದಲ್ಲಿ, ನೆಟ್ಕಲ್ ಗ್ರಾಮದಲ್ಲಿ, ನಾನು, ನನ್ನ ತಾಯಿ ಮತ್ತು ನನ್ನ ತಂದೆ ವಾಸವಿದ್ದೆವು. ನನ್ನ ತಂದೆ ಕೂಲಿ ಕೆಲಸ ಮಾಡುತ್ತಿದ್ದರು. ನನ್ನ ತಾಯಿ, ಮನೆಯಲ್ಲಿ ಇರುತ್ತಿದ್ದರು.

2) 2022 ನೇ ಇಸವಿಯಲ್ಲಿ, ಸಂಜೆ, ನಮ್ಮ ಮನೆಯ ಹಾಲ್ ನಲ್ಲಿ ಕುರ್ಚಿಯಲ್ಲಿ ಕುಳಿತಿದ್ದೆನು. ನನ್ನ ತಾಯಿ, ನನ್ನ ಕುರ್ಚಿಯ ಪಕ್ಕದಲ್ಲಿ, ನೆಲದ ಮೇಲೆ ಕುಳಿತಿದ್ದರು. ಆಗ ಸಮಯ ಸಂಜೆ 6 ರಿಂದ 7.00 ಗಂಟೆ ಆಗಿತ್ತು. ಆಗ ನನ್ನ ತಂದೆ ಮುಂದೆ ಬಂದು, ನಾನು ಮತ್ತು ನನ್ನ ತಾಯಿ ಕುಳಿತಿದ್ದ ಕಡೆಗೆ, ಸೀಮೆಎಣ್ಣೆಯನ್ನು ಬಾಟಲಿಯಿಂದ ಎರಚಿದರು. ಒಂದು ಕೋಲು ತರಹ ಇದ್ದ ಒಂದಕ್ಕೆ, ಬಟ್ಟೆಯನ್ನು ಸುತ್ತಿಕೊಂಡಿದ್ದರು. ಅದಕ್ಕೆ, ಬೆಂಕಿ ಕಡ್ಡಿಯಿಂದ ಬೆಂಕಿಯನ್ನು ಹಚ್ಚಿ, ನಮ್ಮ ಕಡೆಗೆ ಅದನ್ನು ಹಿಡಿದರು. ನನಗೆ ಹೊಡೆದು ಬಿಡುತ್ತಾರನೋ ಎಂದು ನನ್ನ ಎಡಗೈಯನ್ನು ಅಡ್ಡ ಇಟ್ಟಿದ್ದೆನು. ಆಗ ಎಲ್ಲಾ ಕಡೆಗೆ ಚೆಲ್ಲಿ ಹೋಯಿತು. ಅಮ್ಮನಿಗೆ ಬೆಂಕಿ ಹತ್ತಿಕೊಂಡಿತ್ತು. ಅಮ್ಮ ಕೆಳಗೆ ಬಿದ್ದು ಹೋದರು. ನನ್ನ ಎಡಗೈ ಗೆ ಎಲ್ಲ ಬೆಂಕಿಯಿಂದ ಏಟಾಗಿ ಸುಟ್ಟ ಗಾಯ ಆಯಿತು. ನನ್ನ ಮುಖಕ್ಕೆಲ್ಲಾ ಬೆಂಕಿಯಿಂದ ಸುಟ್ಟ ಗಾಯ ಆಯಿತು, ಎಡ ಕಿವಿಗೆ

ಸುಟ್ಟ ಗಾಯ ಆಯಿತು. ನನ್ನ ತಾಯಿಗೆ, ಬೆನ್ನಿಗೆ, ಮುಖಕ್ಕೆ, ಕೈಗೆ ಮತ್ತು ಕಾಲುಗಳಿಗೆ ಸುಟ್ಟ ಗಾಯಗಳಾಯಿತು. ಆ ಸಮಯದಲ್ಲಿ ನಾನು, ಬ್ಲಾಕ್ ನ ಫುಲ್ ಓವರ್ ಬಟ್ಟೆಯನ್ನು ಹಾಕಿಕೊಂಡಿದ್ದೆನು. ನನ್ನ ತಾಯಿ, ಮೆರೂನ್ ಬಣ್ಣದ, ಬಿಳಿ ಚುಕ್ಕಿಯ ಹೂವು ಡಿಸೈನ್ ಸೀರೆಯನ್ನು ಹಾಕಿಕೊಂಡಿದ್ದರು.

3) ನನ್ನ ತಂದೆ, ನಮಗೆ ಈ ರೀತಿ ಯಾವ ಉದ್ದೇಶಕ್ಕೆ ಮಾಡಿದರು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ, ಮನೆಯಲ್ಲಿ ಚೆನ್ನಾಗಿದ್ದರು. ಆಗಾಗ ಜಗಳ ಆಡುತ್ತಿದ್ದರು, ನನ್ನ ತಾಯಿ ಹೇಳುತ್ತಿರಲಿಲ್ಲ. ಆ ಮನೆಯನ್ನು ನಾನೇ ಮುಂದೆ ನಿಂತುಕೊಂಡು ಕಟ್ಟಿಸಿದ್ದೆನು. ಮನೆ ಕಟ್ಟಿಸಿರುವುದರಲ್ಲಿ, ನನ್ನ ತಂದೆಯ ಪಾತ್ರ ಏನು ಇರಲಿಲ್ಲ. ಮನೆಯನ್ನು ಕಟ್ಟುತ್ತಿರುವಾಗ, ನನ್ನ ತಂದೆ ಏನು ಮಾತನಾಡುತ್ತಿರಲಿಲ್ಲ. ಮನೆಯನ್ನು ಕಟ್ಟಿದ ಮೇಲೆ, ನನ್ನ ತಂದೆ ಈ ರೀತಿ ಮಾಡಿದ್ದರು. ಮನೆಯನ್ನು ಕಟ್ಟಿರುವುದರ ಬಗ್ಗೆ, ನನ್ನ ತಂದೆ, ನನಗೆ ಅಥವಾ ನನ್ನ ತಾಯಿಗೆ ಏನು ಹೇಳುತ್ತಿರಲಿಲ್ಲ, ಚೆನ್ನಾಗಿ ಇದ್ದರು. ಈ ಮೇಲಿನ ಘಟನೆ ಆದಾಗ, ಮನೆಯ ಬಗ್ಗೆ ನನ್ನ ತಂದೆ, ಏನು ಹೇಳಿರಲಿಲ್ಲ.

4) ನಮ್ಮ ಊರಿನವರು, ಸುಮಾರು ಜನರು ಬಂದಿದ್ದರು. ಯಾರೋ ಆ್ಯಂಬುಲೆನ್ಸ್ ಗೆ, ಊರಿನವರು ಫೋನ್ ಮಾಡಿದರು ಅನ್ನಿಸಿತ್ತು. ಆ ಮೇಲೆ ಆ್ಯಂಬುಲೆನ್ಸ್ ಬಂದಿತ್ತು. ಮಳವಳ್ಳಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಅಲ್ಲಿಂದ ಮೈಸೂರು government ಆಸ್ಪತ್ರೆಗೆ ಕರೆದುಕೊಂಡು ಹೋದರು. ಮೈಸೂರು government ಆಸ್ಪತ್ರೆಯಲ್ಲಿ, 15 ರಿಂದ 20 ದಿವಸ, ನನ್ನ ತಾಯಿ ಬದುಕಿದ್ದರು. ನಾನು 10 ರಿಂದ 12 ದಿನಗಳು ಚಿಕಿತ್ಸೆಯನ್ನು ಮೈಸೂರು government ಆಸ್ಪತ್ರೆಯಲ್ಲಿ ಪಡೆದುಕೊಂಡಿದ್ದೆನು. ಪೊಲೀಸರು, ಮೈಸೂರು government ಆಸ್ಪತ್ರೆಗೆ ಬಂದಿದ್ದರು. ಪೊಲೀಸರು, ನನ್ನನ್ನು ವಿಚಾರಣೆ ಮಾಡಿದರು. ನಾನು ವಿಚಾರವನ್ನು ತಿಳಿಸಿದ್ದೆನು, ಹೇಳಿಕೆಯನ್ನು ಕೊಟ್ಟಿದ್ದೆನು. ನನ್ನ ಹೇಳಿಕೆ ದೂರನ್ನುಈಗ ನೋಡುತ್ತಿದ್ದು, ಅದನ್ನು ನಿಪಿ.1 ಎಂದು, ಅದರಲ್ಲಿ ಇರುವ ನನ್ನ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ನನ್ನ ಹೇಳಿಕೆಯನ್ನು ಪೊಲೀಸರು ತೆಗೆದುಕೊಳ್ಳುವ ಸಮಯದಲ್ಲಿ, ಪೊಲೀಸರು ಮತ್ತು ವೈದ್ಯರು ಸ್ಥಳದಲ್ಲಿ ಹಾಜರಿದ್ದರು.

5) ಈಗ ನನಗೆ ತೋರಿಸಿದ 2 ಫೋಟೋಗಳನ್ನು ಗುರುತಿಸಲು ಆಗುತ್ತದೆ. ಒಂದು ಫೋಟೋದಲ್ಲಿ, ಪೊಲೀಸರು, ನನ್ನ ಹೇಳಿಕೆಯನ್ನು ತೆಗೆದುಕೊಳ್ಳುತ್ತಿದ್ದಾರೆ. ಈ ಫೋಟೋದಲ್ಲಿ, ಪೊಲೀಸರು ಮತ್ತು ವೈದ್ಯರು ಇದ್ದಾರೆ. ಇನ್ನೊಂದು ಫೋಟೋದಲ್ಲಿ, ನನಗೆ ಗಾಯ ಆಗಿರುತ್ತದೆ. ಸದರಿ ಎರಡು ಫೋಟೋಗಳನ್ನು ನಿಪಿ.2 ಮತ್ತು ನಿಪಿ.3 ಎಂದು ಗುರುತಿಸಲಾಯಿತು.

6) ನನ್ನ ತಾಯಿ, ಆಸ್ಪತ್ರೆಯಲ್ಲಿ ತೀರಿಕೊಂಡಾಗ, ಈ ವಿಷಯವನ್ನು ಪೊಲೀಸರಿಗೆ ನಾನು ತಿಳಿಸಿದೆನು. ದೂರನ್ನು ನೀಡಿದೆನು. ದೂರನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ.4 ಎಂದು, ಇದರಲ್ಲಿ ಇರುವ ನನ್ನ ಸಹಿಯನ್ನು ನಿಪಿ.4(ಎ)ಎಂದು ಗುರುತಿಸಲಾಯಿತು. ಪೊಲೀಸರು, ಆಸ್ಪತ್ರೆಯಲ್ಲಿ ನನ್ನ ತಾಯಿಯನ್ನು ಮಾತನಾಡಿಸಿ, ವಿಚಾರಿಸಿದರು.

7) ನಾನು ಮೇಲೆ ಹೇಳಿದ ವಸ್ತುಗಳಾದ, ಎಲ್ಲಾ ವಸ್ತುಗಳನ್ನು ಈಗ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು, ನ್ಯಾಯಾಲಯದ ಮುಂದೆ ಇರುವ,

(1) ಅರ್ಧ ಲೀಟರ್ ನ ಒಂದು ಪ್ಲಾಸ್ಟಿಕ್ ಬಾಟಲ್

(2) ಒಂದು ಬೆಂಕಿ ಪೊಟ್ಟಣ,

(3) ಸುಟ್ಟಿರುವ ಬಿಳಿ ಹೂವಿನ ಚಿತ್ರ ಇರುವ ನೇರಳೆ ಬಣ್ಣದ ಸೀರೆ,

(4) ಮೆರೂನ್ ಕಲರ್ ರವಿಕೆ,

(5) ಕೇಸರಿ ಬಣ್ಣದ ಒಂದು ಒಳ ಲಂಗ,

(6) ಒಂದು ಕಪ್ಪು ಬಣ್ಣದ ಜರ್ಕಿನ್

(7) ಒಂದು ದೊಣ್ಣೆ ಮುಂಭಾಗಕ್ಕೆ ಸುತ್ತಿರುವ ಒಂದು ಬಿಳಿ ಬಟ್ಟೆಯ ದೊಣ್ಣೆಯನ್ನು,

ಈ ವಸ್ತುಗಳನ್ನು ಸಾಕ್ಷಿಯು ನ್ಯಾಯಾಲಯದಲ್ಲಿ ನೋಡಿ ಗುರುತಿಸಿದ ಮೇರೆಗೆ, ಅವುಗಳನ್ನು ಮುಮಾ.1 ರಿಂದ ಮುಮಾ.7 ಎಂದು ಅನುಕ್ರಮವಾಗಿ ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಸಾ.ಅ ರವರು ಸಾಕ್ಷಿ ಹೇಳಿಕೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದಾರೆ ಎಂದು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಗಿದೆ).

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1) ನನ್ನ ತಂದೆ, ನಮಗೆ ಬೆಂಕಿಯನ್ನು ಹಾಕಿದ್ದು, ದಿಃ 03.08.2022 ರಂದು ಎಂದರೆ ಸರಿ. ನಮ್ಮ ಮನೆ ಕಟ್ಟಿಸಿದ್ದರ ವಿಚಾರವಾಗಿ, ನನ್ನ ತಂದೆ ಆಗಾಗ, ಮನೆಯಲ್ಲಿ ಗಲಾಟೆ ಮಾಡುತ್ತಿದ್ದರು

ಎಂದರೆ ಸರಿ. ಆ ದಿನವೂ, ಅಂದರೆ ದಿಃ03.08.2022 ರಂದು, ರಾತ್ರಿ 7.00 ಗಂಟೆಯಲ್ಲಿ, ನನಗೂ ಮತ್ತು ನನ್ನ ತಾಯಿಯ ಮೇಲೆ ಸೀಮೆಎಣ್ಣೆಯನ್ನು ಎರಚಿ, ಬೆಂಕಿಯನ್ನು ಹಚ್ಚುವ ನಿಕಟ ಪೂರ್ವದಲ್ಲಿ, ''ಅವರು ಏಕಾಏಕಿ ಮನೆಗೆ ನುಗ್ಗಿ, ಬೋಳಿ ಮಕ್ಕಳ, ಸೂಳೆ ಮಕ್ಕಳ, ಅವ್ವ ಮಗನಿಗೆ ಈ ಮನೆ ಕಟ್ಟಿ ಸಾಕಾಗಿತ್ತಾ, ಈ ಮನೆ ನನ್ನದು, ನೀವಿಬ್ಬರೂ ಮನೆಯಿಂದ ಹೊರಗೆ ಹೋಗಿ ಅಂತ ಬೈದಿದ್ದರು '' ಎಂದರೆ ಸರಿ. ''ಸಿದ್ದೇಗೌಡರವರು ಮನೆಯನ್ನು ಹೊಸದಾಗಿ ಕಟ್ಟಿರುವ ವಿಚಾರದಲ್ಲಿ ಹಾಗೂ ಆಡುಗಳು (ಮೇಕೆ) ನನಗೆ ಸೇರಬೇಕೆಂದು ಏಕಾಏಕಿ ಮನೆಯ ಒಳಗೆ ನುಗ್ಗಿ ನನ್ನನ್ನು ಹಾಗೂ ನನ್ನ ತಾಯಿ ಮಹದೇವಮ್ಮರವರನ್ನು ಕೊಲೆ ಮಾಡುವ ಉದ್ದೇಶದಿಂದ, ಸೀಮೆಎಣ್ಣೆ ಎರಚಿ ಬೆಂಕಿ ಹಚ್ಚಿರುತ್ತಾರೆ '' ಎಂದರೆ ಸರಿ. ನನ್ನನ್ನು ಮತ್ತು ನನ್ನ ತಾಯಿಯನ್ನು ಕೊಲೆ ಮಾಡುವ ಉದ್ದೇಶದಿಂದಲೇ, ನನ್ನ ತಂದೆ, ಸೀಮೆಎಣ್ಣೆ ಎರಚಿ ಬೆಂಕಿ ಹಚ್ಚಿರುತ್ತಾರೆ ಎಂದು ನನ್ನ ವಿಚಾರಣಾ ಕಾಲದಲ್ಲಿ, ಪೊಲೀಸರಿಗೆ ನಾನು ತಿಳಿಸಿರುತ್ತೇನೆ ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಬಿ ಕೆ ಜಿ (ಎಲ್ ಎ ಡಿ ಸಿ - ಡಿ ಎಲ್ ಎಸ್ ಎ) ವಕೀಲರಿಂದ ಃ</u>**

1) ಘಟನೆ ನಡೆದಿದ್ದ ದಿನಾಂಕ, ದಿವಸ, ತಿಂಗಳು ನನಗೆ ಖುದ್ದಾಗಿ ಗೊತ್ತಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು, ಇದನ್ನು ಮರೆತು ಬಿಟ್ಟಿದ್ದೇನೆ ಎಂದು ಹೇಳುತ್ತಾರೆ. ಈ ಘಟನೆ ಬಗ್ಗೆ, ನನ್ನ ತಾಯಿ ಪೊಲೀಸರಿಗೆ ದೂರನ್ನು ಕೊಟ್ಟಿರಲಿಲ್ಲ. ನಾನು ದೂರನ್ನು ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ದೂರನ್ನು ಬರವಣಿಗೆಯಲ್ಲಿ ಕೊಟ್ಟಿದ್ದೆನೋ, ಇಲ್ಲವೋ ಎಂಬುದನ್ನು ಈಗ ಮರೆತು ಬಿಟ್ಟಿದ್ದೇನೆ. ನನ್ನ ತಂದೆಗೆ, ನಾವು 3 ಜನ ಮಕ್ಕಳು. ನನಗೆ ಇಬ್ಬರು ಅಕ್ಕಂದಿರು. ಇಬ್ಬರು ಅಕ್ಕಂದಿರಿಗೆ ಮದುವೆ ಆಗಿದೆ. ಒಬ್ಬ ಅಕ್ಕ ಮೈಸೂರಿನಲ್ಲಿ ಇದ್ದಾರೆ, ಇನ್ನೊಬ್ಬ ಅಕ್ಕ ತಮಿಳುನಾಡಿನಲ್ಲಿ ಇದ್ದಾರೆ. ದಿಃ 03.08.2022 ರಂದು ರಾತ್ರಿಯಲ್ಲಿ ಅಕ್ಕಂದಿರಿಗೆ ಫೋನ್ ಮಾಡಿ, ವಿಷಯವನ್ನು ತಿಳಿಸಿದ್ದೆನು, ಅವರುಗಳು ಆಸ್ಪತ್ರೆಗೆ ಬಂದಿದ್ದರು.

2) ನಮ್ಮ ಮನೆಯ ಅಕ್ಕ ಪಕ್ಕದಲ್ಲಿ, ಸುಮಾರು 10 ರಿಂದ 15 ಮನೆಗಳು ಇವೆ. ಘಟನೆ ನಡೆದಿದ್ದ ದಿನ, ಘಟನೆಯ ಸಮಯದಲ್ಲಿ ಸುಮಾರು ಜನರು ಸೇರಿದ್ದರು. ಬಂದಿದ್ದ ಜನರ ಮುಖಗಳನ್ನು ನಾನು ನೋಡಲು ಆಗಲಿಲ್ಲ, ಏಕೆಂದರೆ, ನನ್ನ ತಾಯಿಯನ್ನು ನೋಡುತ್ತಿದ್ದೆನು

ಕುಳಿತುಕೊಂಡು ಅಳುತ್ತಿದ್ದೆನು. ನನ್ನ ತಾಯಿಗೆ, ಅಪ್ಪ ಯಾಕೆ ಈಗೆ ಮಾಡಿದರು ಅಂತ ವಿಚಾರಿಸಲಿಲ್ಲ. ನನ್ನ ತಾಯಿ, ನನಗೆ ಏನೂ ಹೇಳಲಿಲ್ಲ. ನಾನು, ನನ್ನ ತಂದೆ ಮತ್ತು ತಾಯಿ ಎಲ್ಲರೂ ಅನ್ಯೋನ್ಯವಾಗಿ ಮನೆಯಲ್ಲಿ ವಾಸ ಮಾಡುತ್ತಿದ್ದೆವು ಎಂದರೆ ಸರಿ. ನನ್ನ ತಂದೆಗೆ, ನನ್ನ ಮೇಲೆ ಯಾವುದೇ ದ್ವೇಷ ಇರಲಿಲ್ಲ ಹಾಗೂ ನಮಗೂ ಸಹ ನನ್ನ ತಂದೆ ಮೇಲೆ ಯಾವುದೇ ದ್ವೇಷ ಇರಲಿಲ್ಲ ಎಂದರೆ ಸರಿ.

3) ಘಟನೆ ನಡೆದಿದ್ದ ಸಮಯ ಆ ದಿವಸ, ಸಂಜೆ 7.00 ಗಂಟೆ ಆಗಿತ್ತು ಮತ್ತು ಕತ್ತಲೆಯಾಗಿತ್ತು ಎಂದರೆ ಸರಿ. ಕತ್ತಲೆಯಾಗಿದ್ದರಿಂದ, ನಮ್ಮ ಮನೆಗೆ ಏಕಾಏಕಿ ಯಾರು ಒಳಗೆ ನುಗ್ಗಿದರು ಅಂತ, ನಮಗೆ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ, ಮನೆಯ ಒಳಗೆ ಏಕಾಏಕಿ ನುಗ್ಗುವ ಪೂರ್ವದಲ್ಲಿ ಎಲ್ಲಿಗೆ ಹೋಗಿದ್ದರು ಎಂದು ಗೊತ್ತಿಲ್ಲ. ಮನೆಯ ಒಳಗ್ಗೆ ನಮ್ಮ ತಂದೆ ನುಗ್ಗಿದ್ದನ್ನು, ನಾನು ಇದ್ದ ಜಾಗದಿಂದ, ಸುಮಾರು 6 ರಿಂದ 8 ಅಡಿ ಅಂತರದಲ್ಲಿ ನನ್ನ ತಂದೆಯನ್ನು ನೋಡಿದ್ದೆನು. ನಾನು ನೋಡಿದಾಗ, ನನ್ನ ತಂದೆ ಮನೆಯ ಒಳಗಡೆ ಬಂದಿದ್ದರು. ಆಗ ನನ್ನ ತಂದೆ, ಕೈಯ್ಯಲ್ಲಿ, ಯಾವುದಾದರೂ ವಸ್ತುಗಳನ್ನು ಹಿಡಿದುಕೊಂಡಿದ್ದರಾ ಎಂದು ಗಮನಿಸಲಿಲ್ಲ, ಏಕೆಂದರೆ, ನಾನು ತಲೆ ಬಗ್ಗಿಸಿಕೊಂಡು ಕುಳಿತಿದ್ದೆನು. ನನ್ನ ತಾಯಿ, ನನ್ನ ಕುರ್ಚಿಯ ಪಕ್ಕದಲ್ಲಿ ಕೆಳಗಡೆ ಸುಮ್ಮನೆ ಕುಳಿತಿದ್ದರು. ನನ್ನ ತಾಯಿಯೂ ಸಹ, ತಲೆ ತಗ್ಗಿಸಿಕೊಂಡು ಕುಳಿತಿದ್ದರು. ನನ್ನ ತಂದೆ, ಏಕಾಏಕಿ ಮನೆಯ ಒಳಗೆ ಬಂದಾಗ, ನಾನು, ಅವರು ಸುಮ್ಮನೆ ಬಂದಿದ್ದಾರೆ ಅಂದುಕೊಳ್ಳುವಷ್ಟರಲ್ಲಿ, ನನ್ನ ತಂದೆ, ಕೃತ್ಯವನ್ನು ಎಸಗಿಬಿಟ್ಟರು. ನನ್ನ ತಂದೆ, ಸೀಮೆಎಣ್ಣೆಯನ್ನು ಎರಚಿದ ತಕ್ಷಣವೇ ಬೆಂಕಿಯನ್ನು ಹಚ್ಚಿಬಿಟ್ಟರು. Fraction of a second ನಲ್ಲಿ, ನನ್ನ ತಂದೆ, ಸೀಮೆಎಣ್ಣೆಯನ್ನು ಎರಚಿ, ಬೆಂಕಿಯನ್ನು ಹಚ್ಚಿಬಿಟ್ಟಿದ್ದರು. ನನ್ನ ತಂದೆ, ಮನೆಯ ಒಳಗೆ ಬರುವುದಕ್ಕಿಂತ ಮುಂಚೆ, ಹಿಡಿದುಕೊಂಡಿದ್ದ ಬಟ್ಟೆ ಸುತ್ತಿದ್ದ ಕೋಲಿಗೆ ಬೆಂಕಿ ಹಚ್ಚಿರಲಿಲ್ಲ. ಹಿಡಿದುಕೊಂಡಿದ್ದ ಬಟ್ಟೆಸುತ್ತಿದ್ದ ಕೋಲಿಗೂ ಸಹ ಬೆಂಕಿ ಹತ್ತಿಕೊಂಡಿತ್ತು. ಕೋಲಿಗೆ ಕಟ್ಟಿದ್ದ ಬಟ್ಟೆ ಪೂರ್ತಿ ಸುಟ್ಟೆ ಕರಕಲಾಗಿತ್ತಾ ಎಂಬುದನ್ನು ನಾನು ಗಮನಿಸಲಿಲ್ಲ, ಏಕೆಂದರೆ, ನಾನು ನನ್ನ ತಾಯಿಯನ್ನು ಎತ್ತಿಕೊಂಡು ಆಚೆಗೆ ಹೋಗಿದ್ದೆನು. ಸೀಮೆಎಣ್ಣೆ ತಂದಿದ್ದ ಬಾಟಲಿ, ಬಟ್ಟೆ ಸುತ್ತಿ ಬೆಂಕಿ ಹಚ್ಚಿದ್ದ ಕಡ್ಡಿ, ಮತ್ತು ಬೆಂಕಿ ಪೊಟ್ಟಣ ಏನಾಯಿತು ಅಂತ ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು, ನಾನು ಗಮನಿಸಲಿಲ್ಲ ಎನ್ನುತ್ತಾರೆ.

4) ಆಸ್ಪತ್ರೆಗೆ ಹೋಗುವುದಕ್ಕೆ, ಮನೆಯನ್ನು ಎಷ್ಟು ಗಂಟೆಗೆ ಬಿಟ್ಟಿದ್ದೆನು ಅಂತ ಗಂಟೆಯನ್ನು ನೋಡಿಕೊಳ್ಳಲಿಲ್ಲ. ನಮ್ಮ ಗ್ರಾಮ, ಬೆಳಕವಾಡಿ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಇದೆ. ಬೆಳಕವಾಡಿ ಪೊಲೀಸ್ ಠಾಣೆ, ನಮ್ಮ ಮನೆಯಿಂದ ಎಷ್ಟು ದೂರ ಆಗುತ್ತದೆ ಎಂದು ಗೊತ್ತಿಲ್ಲ. ನಾನು ಮೈಸೂರು ಆಸ್ಪತ್ರೆಗೆ ಹೋಗುವುದಕ್ಕಿಂತ ಮೊದಲು, ಪೊಲೀಸ್ ಠಾಣೆಗೆ ಖುದ್ದಾಗಿ ಹೋಗಿ ದೂರು ಕೊಡುವುದಕ್ಕೆ ನನಗೆ ತೊಂದರೆ ಇತ್ತು. ಯಾಕೆಂದರೆ, ನನ್ನ ತಾಯಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕಿತ್ತು. ಆಸ್ಪತ್ರೆಗೆ ಬಂದು ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಕೇಸಿಗಾಗಿ ನನ್ನ ಹೇಳಿಕೆಯನ್ನು, ನಾನು ಮತ್ತು ಪೊಲೀಸರು, ಸೃಷ್ಟಿ ಮಾಡಿಕೊಂಡಿರುವ ದಾಖಲೆಯಾಗಿದೆ ಎಂದರೆ ಸರಿಯಲ್ಲ. ಈ ಘಟನೆ ನಡೆಯುವ ಪೂರ್ವದಲ್ಲಿ, ನನ್ನ ತಂದೆ, ಆಗಾಗ ನನ್ನ ತಾಯಿಯ ಜೊತೆ ಗಲಾಟೆ ಮಾಡುತ್ತಿದ್ದರು, ಮತ್ತೆ ಒಂದಾಗುತ್ತಿದ್ದರು. ಸಣ್ಣ ಪುಟ್ಟ ವಿಚಾರ ಆಗಿರುವುದರಿಂದ, ನನ್ನ ತಾಯಿ ಇದನ್ನು ನನಗೆ ಹೇಳುತ್ತಿರಲಿಲ್ಲ. ನನ್ನ ತಂದೆ, ಸಣ್ಣ ಪುಟ್ಟ ಗಲಾಟೆ ಮಾಡುತ್ತಿರಲಿಲ್ಲ ಎಂರದೆ ಸರಿಯಲ್ಲ ಈ ಕೇಸಿಗಾಗಿ ನನ್ನ ತಂದೆ, ಸಣ್ಣ ಪುಟ್ಟ ಗಲಾಟೆ ಮಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.2 ಮತ್ತು ನಿಪಿ.3 ಫೋಟೋಗಳನ್ನು ಕೇಸಿಗಾಗಿ ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ.

5) ನಾನು ಕಬ್ಬಿಣದ ವರ್ಕ್ ಶಾಪ್ ನಲ್ಲಿ ಸಣ್ಣ ಪುಟ್ಟ ಕೆಲಸ ಮಾಡಿಕೊಂಡಿದ್ದೇನೆ. ವರ್ಕ ಶಾಪ್ ನಲ್ಲಿ ವೆಲ್ಡಿಂಗ್ ಕೆಲಸವನ್ನು ಸಹ ಮಾಡುತ್ತಾರೆ ಎಂದರೆ ಸರಿ. ನಾನು ವೆಲ್ಡಿಂಗ್ ಕೆಲಸವನ್ನು ಮಾಡುವುದಿಲ್ಲ. ನಿಪಿ.2 ಮತ್ತು 3 ಫೋಟೋದಲ್ಲಿ ಕಾಣಿಸುತ್ತಿರುವ ಗಾಯಗಳು, ನಾನು ಕೆಲಸ ಮಾಡುತ್ತಿದ್ದ ಜಾಗದಲ್ಲಿ, ವೆಲ್ಡಿಂಗ್ ಸಮಯದಲ್ಲಿ ಆಗಿದ್ದಂತಹ ಗಾಯಗಳು ಆಗಿವೆ ಎಂದರೆ ಸರಿಯಲ್ಲ. ಈ ಗಾಯಗಳನ್ನು ದುರಪಯೋಗ ಪಡಿಸಿಕೊಂಡು, ನನ್ನ ತಂದೆ ಸೀಮೆಎಣ್ಣೆಯನ್ನು ಎರಚುವಾಗ, ಅಡ್ಡಲಾಗಿ ನನ್ನ ಕೈಯನ್ನು ಕೊಟ್ಟಿದ್ದಾಗ ಸುಟ್ಟ ಗಾಯಗಳು ಆಗಿತ್ತು ಅಂತ ಸುಳುಳ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ, ಅಡಿಗೆ ಮಾಡುವಂತಹ ಸಂದರ್ಭದಲ್ಲಿ ಅವರಿಗೆ ಸುಟ್ಟ ಗಾಯಗಳು ಆಗಿತ್ತು ಎಂದರೆ ಸರಿಯಲ್ಲ ಮತ್ತು ನನ್ನ ತಂದೆ ಎಸಗಿದ ಕೃತ್ಯದಿಂದ ಆದ ಗಾಯಗಳು ಅಲ್ಲ ಎಂದರೆ ಸರಿಯಲ್ಲ. ಯಾವತ್ತೂ ಸಹ, ನನ್ನ ತಂದೆ, ನನಗೆ ಮತ್ತು ನನ್ನ ತಾಯಿಗೆ, ನಿಮ್ಮನ್ನು ಸಾಯಿಸುತ್ತೇನೆ ಅಂತ ಹೇಳಿರಲಿಲ್ಲ ಎಂದರೆ ಸರಿ. ಮುಮಾ.1 - ಸೀಮೆಎಣ್ಣೆ ಬಾಟಲಿ ಮೇಲೆ ಯಾವುದೇ ವಿಶೇಷವಾದ ಗುರುತನ್ನು ಇಟ್ಟುಕೊಂಡಿರುವುದಿಲ್ಲ ಆದರೆ ಅದನ್ನು ಕೃತ್ಯದ ಸಮಯದಲ್ಲಿ ನೋಡಿದ್ದೆನು. ನನ್ನ ತಂದೆ, ಸೀಮೆಎಣ್ಣೆ ಬಾಟಲಿಯನ್ನು ತಂದಿದ್ದನ್ನು ನಾನು

ನೋಡಿರಲಿಲ್ಲ ಎಂದರೆ ಸರಿ. ಮುಮಾ.7 - ಒಂದು ದೊಣ್ಣೆ ಮುಂಭಾಗಕ್ಕೆ ಸುತ್ತಿರುವ ಒಂದು ಬಿಳಿ ಬಟ್ಟೆಯ ದೊಣ್ಣೆಯನ್ನು ಕೃತ್ಯಕ್ಕೆ ಬಳಸಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ, ಯಾವುದೇ ದೊಣ್ಣೆಯನ್ನು, ಅದಕ್ಕೆ ಬಟ್ಟೆ ಸುತ್ತಿ ಹಿಡಿದುಕೊಂಡು ಬಂದಿರಲಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ, ಯಾವುದೇ ಘಟನೆ ನಡೆದಿಲ್ಲದೇ ಇದ್ದರೂ ಸಹ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u> ಏನು ಇಲ್ಲ**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.